ದಿನಾಂಕಃ16/12/2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರವಾಗಿಃ**

**ಶ್ರೀ ಯು.ಎಸ್.ಜಿ. ವಕೀಲರಿಂದಃ-**

1. ಈ ದಿನ ನಾನು ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾಗಿರುತ್ತವೆ. ಅದರ ಮೇಲಿರುವ ಸಹಿ ನನ್ನದೇ ಆಗಿರುತ್ತದೆ. 4 ನೇ ಎದುರುದಾರ ಮತ್ತು 2 ಮತ್ತು 3 ನೇ ಎದುರುದಾರರ ವಾರಸುದಾರರಾದ ಎದುರುದಾರ ನಂ.2(ಎ) ರಿಂದ (ಡಿ) ಮತ್ತು 3(ಎ) ರಿಂದ (ಡಿ) ರವರು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಮತ್ತು ಠೇವಣಿ ಇಟ್ಟ ಪರಿಹಾರ ಧನವನ್ನು ಪಡೆಯಲು ತಮ್ಮದು ಯಾವುದೇ ತಕರಾರು ಇರುವುದಿಲ್ಲ ಮತ್ತು ಅವರ ಪರವಾಗಿ ದಿನಾಂಕಃ15/9/2023 ರಂದು ಒಟ್ಟು ಮೊಕ್ತಿಯಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದನ್ನು ನಿಆರ್-1 ಅಂತಾ ಗುರುತಿಸಲಾಯಿತು.

2. 5 ನೇ ಎದುರುದಾರಳು ಓ.ಎಸ್. ನಂ.42/2012 ದಾಖಲಿಸಿ ದಾವಾ ಆಸ್ತಿ ನಂ.2234 ಮತ್ತು 2235/1 ನೇದ್ದರಲ್ಲಿ ಹೊಟೇಲ್ ಮತ್ತು ತಾನು ವಾಸವಾಗಿರಲು ಬಾಡಿಗೆದಾರಳಾಗಿ ಸಾಧಿಸಿ, ದಿನಾಂಕಃ7/9/2017 ರಂದು ತಾಕೀತು ಮನಾಯಿ ಡಿಕ್ರಿ ಪಡೆದುಕೊಂಡಿರುತ್ತಾಳೆ. ನಾವೇ ಸದರಿ ದಾವಾಸ್ತಿಯ ಸಂಪೂರ್ಣ ಮಾಲೀಕರು ಆಗಿರುತ್ತೇವೆ. ಸದರಿ ದಾವಾಸ್ತಿಯಲ್ಲಿಯ ಹೊಟೇಲ್ ಇರುವ ಕಟ್ಟಡವು ಎನ್.ಎಚ್.ಗಾಗಿ ಭೂಸ್ವಾಧೀನವಾಗಿರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯ ಪ್ರತಿಗಳನ್ನು ಅರ್ಜಿದಾರರು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆ.

3. ಸದರಿ ದಾವಾಸ್ತಿಯಲ್ಲಿ ಭೂಸ್ವಾಧೀನಗೊಂಡ ನಂತರ 5 ನೇ ಎದುರುದಾರಳು ಸದರಿ ಆಸ್ತಿಯ ಉಳಿಕೆ ಭಾಗದಲ್ಲಿಯ ಮನೆಯಲ್ಲಿ ನಮ್ಮ ಬಾಡಿಗೆದಾರಳು ಅಂತಾ ವಾಸವಾಗಿರುತ್ತಾಳೆ. ನಾವು ಸದರಿ ಭೂಸ್ವಾಧೀನಗೊಂಡ ಆಸ್ತಿಯ ಮಾಲೀಕರಿರುವ ಕಾರಣ, ಈ ಪ್ರಕರಣದಲ್ಲಿ ಠೇವಣಿ ಇಟ್ಟ ಸಂಪೂರ್ಣ ಹಣವನ್ನು ಪಡೆಯಲು ನಾನು ಮಾತ್ರ ಹಕ್ಕುದಾರನಾಗಿರುತ್ತೇನೆ. ಏಕೆಂದರೆ ಉಳಿದ ಎದುರುದಾರ ನಂ.2(ಎ) ರಿಂದ (ಡಿ), 3(ಎ) ರಿಂದ (ಡಿ) ಮತ್ತು 4 ರವರು ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡ ಪ್ರಯುಕ್ತ ಸದರಿ ಆಸ್ತಿ ನಂ.2234 ಮತ್ತು 2235/1 ನನ್ನ ಪಾಲಿಗೆ ಬಂದಿರುತ್ತದೆ.

(ಈ ಹಂತದಲ್ಲಿ ದಾಖಲೆಯನ್ನು ಹಾಜರುಪಡಿಸುವುದಾಗಿ ತಿಳಿಸಿ, ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರುತ್ತಾರೆ. ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ.

ಈ ಮೇಲ್ಕಾಣಿಸಿದ ದಾಖಲೆಗಳನ್ನು ಅರ್ಜಿದಾರರು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತಾರೆ.

ಆದ್ದರಿಂದ ಈ ಪ್ರಕರಣದಲ್ಲಿ ಠೇವಣಿ ಇಟ್ಟ ಪರಿಹಾರ ಧನ ನನ್ನ ಹೆಸರಿನಲ್ಲಿ ಬಿಡುಗಡೆ ಮಾಡಲು ಆದೇಶಿಸಬೇಕು ಅಂತಾ ಕೋರುತ್ತೇನೆ.

**<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಜಿ.ಎನ್.ಜಿ. ವಕೀಲರು ಗೈರು ಹಾಜರಿದ್ದು</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.